All India Radio: Bangalore
National Bulletin In Kannada
16.06.2025 07.35 a.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**<><><><>**

ಮುಖ್ಯಾಂಶಗಳು

1. ಪ್ರಧಾನಿ ನರೇಂದ್ರ ಮೋದಿ ಸೈಪ್ರಸ್ ಭೇಟಿ ; ವ್ಯಾಪಾರ ದುಂಡುಮೇಜಿನ ಸಭೆಯಲ್ಲಿ ಭಾಗಿ
2. ಜನ ಗಣತಿಗೆ ಗೆಜೆಟ್ ಅಧಿಸೂಚನೆ ಇಂದು ಪ್ರಕಟ ; ಇದೇ ಮೊದಲ ಬಾರಿಗೆ ಜಾತಿ ಗಣತಿ
3. ಇಸ್ರೇಲ್-ಇರಾನ್ ಸಂಘರ್ಷ ಹಿನ್ನೆಲೆ ಜಾಗತಿಕ ತೈಲ ಬೆಲೆಗಳ ಏರಿಕೆ
4. ನಕ್ಷಾ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದ ೨ನೇ ಬ್ಯಾಚ್‌ಗೆ ಇಂದು ಚಾಲನೆ
5. ಸೂಪರ್ ವೆಲ್ಟರ್‌ವೇಟ್ ಬಾಕ್ಸಿಂಗ್ ; ಭಾರತದ ನಿಶಾಂತ್ ದೇವ್‌ಗೆ ಪ್ರಶಸ್ತಿ

<><><><>

ಭಾರತ ಮತ್ತು ಸೈಪ್ರಸ್ ನಡುವಿನ ಆರ್ಥಿಕ ಸಹಕಾರ ಬಲವರ್ಧನೆಗೆ ಭಾರತ ಬದ್ಧವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಸೈಪ್ರಸ್‌ನ ಲಿಮಾಸೊಲ್‌ನಲ್ಲಿ ನಡೆದ ವ್ಯಾಪಾರ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಸೈಪ್ರಸ್‌ಗೆ ೨೩ ವರ್ಷಗಳಲ್ಲಿ ಭಾರತೀಯ ಪ್ರಧಾನಮಂತ್ರಿಯವರು ನೀಡುತ್ತಿರುವ ಮೊದಲ ಅಧಿಕೃತ ಭೇಟಿಯನ್ನು ವ್ಯವಹಾರ ಸಂಬಂಧಿತ ಚರ್ಚೆಗಳ ಮೂಲಕ ಆರಂಭಿಸುವುದು, ಆರ್ಥಿಕ ಸಂಬಂಧಗಳ ಬಗ್ಗೆ ಭಾರತ ನೀಡುತ್ತಿರುವ ಮಹತ್ವವನ್ನು ತೋರಿಸುತ್ತದೆ ಎಂದು ಹೇಳಿದರು. ಸೈಪ್ರಸ್ ಭಾರತದ ವಿಶ್ವಾಸಾರ್ಹ ಪಾಲುದಾರ ಎಂದು ಶ್ಲಾಘಿಸಿರುವ ಪ್ರಧಾನಮಂತ್ರಿ, ಭಾರತದಲ್ಲಿ ಸೈಪ್ರಸ್‌ನಿಂದ ಹಲವಾರು ಪ್ರಮುಖ ಹೂಡಿಕೆಗಳಾಗಿವೆ. ಹಲವಾರು ಭಾರತೀಯ ಕಂಪನಿಗಳು ಸೈಪ್ರಸ್ ಅನ್ನು ಯುರೋಪ್ ಪ್ರವೇಶಿಸಲು ಸುಲಭ ಮಾರ್ಗವೆಂದು ಪರಿಗಣಿಸುತ್ತವೆ. ಪ್ರಸ್ತುತ ಭಾರತ-ಸೈಪ್ರಸ್ ದ್ವಿಪಕ್ಷೀಯ ವ್ಯಾಪಾರ ೧೫೦ ಮಿಲಿಯನ್ ಡಾಲರ್‌ಗಳಷ್ಟಿದ್ದರೂ, ಅದರ ವಾಸ್ತವಿಕ ಶಕ್ತಿ ಹಲವು ಪಟ್ಟು ಹೆಚ್ಚಿದೆ ಎಂದು ಮಾಹಿತಿ ನೀಡಿದರು. ಭಾರತ ನೌಕಾ ಮತ್ತು ಬಂದರು ಅಭಿವೃದ್ಧಿ, ಹಡಗು ನಿರ್ಮಾಣ ಕ್ಷೇತ್ರಗಳ ಮೇಲೆ ಗಮನ ಹರಿಸುತ್ತಿದೆ. ಈ ಕ್ಷೇತ್ರಗಳಿಗೆ ಉತ್ತೇಜನ ನೀಡಲು ಹೊಸ ನೀತಿಗಳನ್ನು ಪರಿಚಯಿಸುತ್ತಿದೆ. ನಾಗರಿಕ ವಿಮಾನಯಾನ ಕ್ಷೇತ್ರದಲ್ಲಿ ಕೂಡ ಭಾರೀ ಬೆಳವಣಿಗೆ ನಡೆಯುತ್ತಿದೆ ಎಂದು ಅವರು ಹೇಳಿದರು. ಜಿಎಸ್‌ಟಿ ಮೂಲಕ "ಒಂದು ರಾಷ್ಟ್ರ, ಒಂದು ತೆರಿಗೆ" ತತ್ವವನ್ನು

ಸಾಧಿಸಲಾಗಿದೆ. ಕಾರ್ಪೊರೇಟ್ ತೆರಿಗೆ ದರಗಳಲ್ಲಿ ಸುಧಾರಣೆ ಮಾಡಲಾಗಿದೆ ಹಾಗೂ ಸಾವಿರಾರು ಹಳೆಯ ಕಾನೂನುಗಳನ್ನು ರದ್ದುಪಡಿಸಲಾಗಿದೆ. ಭಾರತ ಈಗ ಸುಗಮ ಹಾಗೂ ವಿಶ್ವಾಸಾರ್ಹ ವ್ಯಾಪಾರ ಕುರಿತೆಯೂ ಒತ್ತು ನೀಡುತ್ತಿದೆ ಎಂದು ಪ್ರಧಾನಿ ಹೇಳಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೩೭ ಸೆಕೆಂಡ್‌ಗಳು)

ಕಳೆದ ದಶಕದಲ್ಲಿ ಭಾರತ ಡಿಜಿಟಲ್ ಕ್ರಾಂತಿಗೆ ಸಾಕ್ಷಿಯಾಗಿದ್ದು, ಪ್ರಸ್ತುತ ವಿಶ್ವದ ಒಟ್ಟು ಡಿಜಿಟಲ್ ಪಾವತಿಗಳ ಪೈಕಿ ಶೇಕಡ ೫೦ ರಷ್ಟು ವಹಿವಾಟುಗಳು ಭಾರತದ ಯುಪಿಐ ಮೂಲಕವೇ ನಡೆಯುತ್ತಿವೆ. ಫ್ರಾನ್ಸ್ ಸೇರಿದಂತೆ ಹಲವು ರಾಷ್ಟ್ರಗಳು ಈ ವ್ಯವಸ್ಥೆಗೆ ಸೇರ್ಪಡೆಗೊಂಡಿವೆ ಎಂದ ಪ್ರಧಾನಿ, ಸೈಪ್ರಸ್‌ನ್ನು ಈ ಪರಿಸರ ವ್ಯವಸ್ಥೆಗೆ ಸೇರಿಸುವ ಕುರಿತು ಚರ್ಚೆಗಳು ನಡೆಯುತ್ತಿರುವುದನ್ನು ಸ್ವಾಗತಿಸಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೦ ಸೆಕೆಂಡ್‌ಗಳು)

ಭವಿಷ್ಯದ ಅಭಿವೃದ್ಧಿಗೆ ಚಾಲನೆ ನೀಡಲು ಭಾರತ ಕೈಗೊಂಡಿರುವ ಪ್ರಮುಖ ಉಪಕ್ರಮಗಳಾದ ಎಐ ಮಿಷನ್, ಕ್ವಾಂಟಮ್ ಮಿಷನ್, ಸೆಮಿಕಂಡಕ್ಟರ್ ಮಿಷನ್, ನಿರ್ಣಾಯಕ ಖನಿಜಗಳ ಯೋಜನೆ, ಮತ್ತು ಪರಮಾಣು ಶಕ್ತಿ ಯೋಜನೆ ಕುರಿತು ಪ್ರಧಾನಿ ವಿವರಿಸಿದರು. ಭಾರತದಲ್ಲಿ ಸೈಪ್ರಸ್ ಷೇರು ಮಾರುಕಟ್ಟೆ ಮತ್ತು ಭಾರತದ ರಾಷ್ಟ್ರೀಯ ಸಂವೇದಿ ಸೂಚ್ಯಂಕಗಳ ನಡುವಿನ ಸಹಕಾರ ಒಪ್ಪಂದವನ್ನು ಮಹತ್ವದ ಹೆಜ್ಜೆ ಎಂದು ಪ್ರಧಾನಿ ಬಣ್ಣಿಸಿದ್ದಾರೆ.

<><><><>

ಸೈಪ್ರಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ನಿಕೋಸಿಯಾದಲ್ಲಿಂದು ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋ ಡೌವ್‌ಲೈಡ್ಸ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಸಭೆಯಲ್ಲಿ ಉಭಯ ನಾಯಕರು ಶಿಕ್ಷಣ, ಡಿಜಿಟಲ್ ಪಾಲುದಾರಿಕೆ ಮತ್ತು ಪ್ರಾದೇಶಿಕ ಭದ್ರತೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಸಮಾಲೋಚನೆ ನಡೆಸಲಿದ್ದಾರೆ. ಇದೇ ವೇಳೆ ಭಾರತ-ಐರೋಪ್ಯ ಒಕ್ಕೂಟ ನಡುವಿನ ಪಾಲುದಾರಿಕೆ ಮತ್ತು ಭಾರತ ಮಧ್ಯಪ್ರಾಚ್ಯ, ಐರೋಪ್ಯ ಆರ್ಥಿಕ ಕಾರಿಡಾರ್ ಸೇರಿದಂತೆ ಜಾಗತಿಕ ಬೆಳವಣಿಗೆಗಳ ಕುರಿತು ಚರ್ಚೆ ನಡೆಯಲಿದೆ. ಸೈಪ್ರಸ್ ಪ್ರವಾಸವನ್ನು ಸಂಪನ್ನಗೊಳಿಸಿ ಪ್ರಧಾನಿ ಕೆನಡಾ ಪ್ರಧಾನಿ ಮಾರ್ಕ್‌ಕಾರ್ನಿ ಅವರ ಆಹ್ವಾನದ

ಮೇರೆಗೆ ಜಿ-೭ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಕೆನಡಾದ ಕನಾನಾಸ್‌ಕಿಸ್‌ಗೆ ಪ್ರಯಾಣ ಬೆಳೆಸಲಿದ್ದಾರೆ.

ಜಿ-೭ ಶೃಂಗಸಭೆ ಬಳಿಕ ಪ್ರಧಾನಿ ಕ್ರೋಯೇಷಿಯಾಗೆ ಭೇಟಿ ನೀಡಲಿದ್ದು, ಅಧ್ಯಕ್ಷ ಜ್ವರಾನ್ ಮಿಲಾನೋವಿಕ್ ಮತ್ತು ಪ್ರಧಾನಿ ಆಂಡ್ರೆಜ್ ಪ್ಲೆಂಕೋವಿಕ್ ಅವರೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ.

<><><><>

ನವದೆಹಲಿಯಲ್ಲಿ ನಿನ್ನೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಕೇಂದ್ರ ಗೃಹ ಕಾರ್ಯದರ್ಶಿ ಮತ್ತು ಇತರ ಹಿರಿಯ ಅಧಿಕಾರಿಗಳೊಂದಿಗೆ ಮುಂಬರುವ ಜನಗಣತಿಯ ಸಿದ್ಧತೆಗಳನ್ನು ಪರಿಶೀಲಿಸಿದರು. ಜನಗಣತಿಯ ಗೆಜೆಟ್ ಅಧಿಸೂಚನೆಯನ್ನು ಇಂದು ಹೊರಡಿಸಲಾಗುವುದು ಎಂದು ಅಮಿತ್ ಶಾ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಜನಗಣತಿಯೊಂದಿಗೆ ಇದೇ ಮೊದಲ ಬಾರಿಗೆ ಜಾತಿ ಗಣತಿ ನಡೆಸಲಾಗುತ್ತಿದೆ. ಸುಮಾರು ೩೪ ಲಕ್ಷ ಗಣತಿದಾರರು ಮತ್ತು ಮೇಲ್ವಿಚಾರಕರು ಹಾಗೂ ಸುಮಾರು ೧.೩ ಲಕ್ಷ ಜನಗಣತಿ ಕಾರ್ಯನಿರ್ವಾಹಕರು ಅತ್ಯಾಧುನಿಕ ಮೊಬೈಲ್ ಡಿಜಿಟಲ್ ಸಾಧನಗಳೊಂದಿಗೆ ಗಣತಿ ಕಾರ್ಯ ನಡೆಸಲಿದ್ದಾರೆ ಎಂದು ಗೃಹ ಸಚಿವರು ತಿಳಿಸಿದ್ದಾರೆ.

ಈ ಕುರಿತು ಒಂದು ವರದಿ : (೩೫ ಸೆಕೆಂಡ್‌ಗಳು)

ದೇಶದಲ್ಲಿ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. ಮೊದಲ ಹಂತದಲ್ಲಿ, ಮನೆ ಪಟ್ಟಿ ಕಾರ್ಯಾಚರಣೆ ಕೈಗೊಳ್ಳಲಾಗುವುದು, ಇದರಲ್ಲಿ, ಪ್ರತಿ ಮನೆಯ ಪರಿಸ್ಥಿತಿಗಳು, ಆಸ್ತಿಗಳು ಮತ್ತು ಸೌಕರ್ಯಗಳನ್ನು ಸಂಗ್ರಹಿಸಲಾಗುತ್ತದೆ. ಎರಡನೇ ಹಂತದಲ್ಲಿ, ಪ್ರತಿ ಮನೆಯ ಪ್ರತಿಯೊಬ್ಬ ವ್ಯಕ್ತಿಯ, ಸಾಮಾಜಿಕ-ಆರ್ಥಿಕ, ಸಾಂಸ್ಕೃತಿಕ ವಿವರಗಳನ್ನು ಸಂಗ್ರಹಿಸಲಾಗುತ್ತದೆ. ನಂತರದ ಜನಗಣತಿಯನ್ನು, ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿಕೊಂಡು, ಡಿಜಿಟಲ್ ವಿಧಾನಗಳ ಮೂಲಕ ನಡೆಸಲಾಗುತ್ತದೆ. ಅಲ್ಲದೇ, ಸ್ವಯಂ ಎಣಿಕೆಯನ್ನು ಸಹ ಜನರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ. ಸಂಗ್ರಹಣೆಯ ಸಮಯದಲ್ಲಿ ದತ್ತಾಂಶ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಅತ್ಯಂತ ಕಠಿಣ ದತ್ತಾಂಶ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ.

<><><>

ವಾರಾಂತ್ಯದಲ್ಲಿ ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಉಲ್ಬಣಗೊಂಡ ಪರಿಣಾಮ, ಏಷ್ಯಾದ ಇಂದಿನ ಆರಂಭಿಕ ವಹಿವಾಟಿನಲ್ಲಿ ಜಾಗತಿಕ ತೈಲ ಬೆಲೆಗಳು ಏರಿಕೆಯಾಗಿವೆ. ಹೆಚ್ಚಿದ ಸಂಘರ್ಷದ ಉದ್ವಿಗ್ನತೆಗಳಿಂದಾಗಿ, ಮಧ್ಯಪ್ರಾಚ್ಯದಿಂದ ತೈಲ ರಫ್ತಿಗೆ ವ್ಯಾಪಕವಾಗಿ ಅಡ್ಡಿ ಉಂಟಾಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇಕಡಾ ೧.೩ ರಷ್ಟು ಏರಿಕೆಯಾಗಿ, ಪ್ರತಿ ಬ್ಯಾರೆಲ್‌ಗೆ ೭೫.೯೩ ಡಾಲರ್ ತಲುಪಿದೆ. ಯುಎಸ್ ವೆಸ್ಟ್ ಟೆಕ್ಸಾಸ್ ಇಂಟರ್ಮೀಡಿಯೇಟ್ ಕಚ್ಚಾ ತೈಲದ ಬೆಲೆ, ಶೇಕಡಾ ೧.೨ ರಷ್ಟು ಏರಿಕೆಯಾಗಿ, ಪ್ರತಿ ಬ್ಯಾರೆಲ್‌ಗೆ ೭೪.೨೦ ಡಾಲರ್ ಆಗಿದೆ. ಕಳೆದ ಶುಕ್ರವಾರ, ಶೇಕಡ ೭ ರಷ್ಟು ಏರಿಕೆಯ ನಂತರ ಈ ಬೆಳವಣಿಗೆ ಕಂಡು ಬಂದಿದೆ.

<><><>

ರಾಷ್ಟ್ರೀಯ ನಗರ ವಾಸಸ್ಥಾನಗಳ ರಾಷ್ಟ್ರೀಯ ಭೌಗೋಳಿಕ ಜ್ಞಾನ ಆಧಾರಿತ ಭೂ ಸಮೀಕ್ಷೆ - ನಕ್ಷಾ ಎಂಬ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮದ ಎರಡನೇ ಹಂತದ ಎರಡನೇ ಬ್ಯಾಚ್ ಇಂದು ಉದ್ಘಾಟನೆಗೊಳ್ಳಲಿದೆ. ಈ ತರಬೇತಿ ಕಾರ್ಯಕ್ರಮದಡಿ, ೧೨೮ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದ ಮತ್ತು ಜಿಲ್ಲಾ ಅಧಿಕಾರಿಗಳನ್ನು ನಾಮನಿರ್ದೇಶನ ಮಾಡಲಾಗಿದೆ. ಈ ಅಧಿಕಾರಿಗಳು, ಪುಣೆ, ಗುವಾಹಟಿ, ಚಂಡೀಗಢ ಮತ್ತು ಮೈಸೂರಿನಲ್ಲಿರುವ ನಾಲ್ಕು ಶ್ರೇಷ್ಠತಾ ಕೇಂದ್ರಗಳಲ್ಲಿ ಪರಿಣಾಮಕಾರಿ ನಗರ ಆಸ್ತಿ ಸಮೀಕ್ಷೆಗಳಿಗಾಗಿ, ಆಧುನಿಕ ಭೂಗೋಳ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಕುರಿತು ಒಂದು ವಾರದ ಪ್ರಾಯೋಗಿಕ ತರಬೇತಿಯನ್ನು ಪಡೆಯಲಿದ್ದಾರೆ. ಎರಡನೇ ಬ್ಯಾಚ್ ಅನ್ನು ಭೂ ಸಂಪನ್ಮೂಲ ಇಲಾಖೆಯ ಕಾರ್ಯದರ್ಶಿ ಮನೋಜ್ ಜೋಶಿ, ನಾಲ್ಕು ಶ್ರೇಷ್ಠತಾ ಕೇಂದ್ರಗಳಲ್ಲಿ ಉದ್ಘಾಟಿಸಲಿದ್ದಾರೆ. ನಕ್ಷಾ ಕಾರ್ಯಕ್ರಮದಡಿ, ಹೆಚ್ಚಿನ ನಿಖರತೆಯ ನಗರ ಭೂ ಸಮೀಕ್ಷೆಗಳನ್ನು ಮೇಲ್ವಿಚಾರಣೆ ಮಾಡಲು ಅಗತ್ಯವಿರುವ ತಾಂತ್ರಿಕ ಮತ್ತು ಪ್ರಾಯೋಗಿಕ ಕೌಶಲ್ಯಗಳೊಂದಿಗೆ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು ಮತ್ತು ಕ್ಷೇತ್ರ ಸಿಬ್ಬಂದಿಯನ್ನು ಸಜ್ಜುಗೊಳಿಸುವ ಗುರಿಯನ್ನು ಹೊಂದಲಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವಾಲಯ ತಿಳಿಸಿದೆ.

<><><>

ಉಪರಾಷ್ಟ್ರಪತಿ ಜಗದೀಪ್ ಧನಕರ್ ಮೂರು ದಿನಗಳ ಅಧಿಕೃತ ಭೇಟಿಗಾಗಿ ಪುದುಚೇರಿಗೆ ಆಗಮಿಸಿದ್ದಾರೆ. ಎಪಿಜೆ ಅಬ್ದುಲ್ ಕಲಾಂ ಸಭಾಂಗಣದಲ್ಲಿಂದು, 'ರಾಷ್ಟ್ರ ನಿರ್ಮಾಣದಲ್ಲಿ ಪರಿಸರ

ಸುಸ್ಥಿರತೆ' ಎಂಬ ವಿಶೇಷ ಕಾರ್ಯಕ್ರಮದಲ್ಲಿ ಉಪರಾಷ್ಟ್ರಪತಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಸುಸ್ಥಿರ ಅಭಿವೃದ್ಧಿಯ ಸುತ್ತ ಸಂವಾದ ಮತ್ತು ಜಾಗೃತಿ ಮೂಡಿಸುವ ಗುರಿಯನ್ನು ಈ ಕಾರ್ಯಕ್ರಮ ಹೊಂದಿದೆ. ಜಿಪ್ಮರ್‌ನ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಿಬ್ಬಂದಿಯೊಂದಿಗೆ ಸಂವಾದಾತ್ಮಕ ಅಧಿವೇಶನದಲ್ಲಿ ಅವರು ಭಾಗವಹಿಸಲಿದ್ದಾರೆ. ಇದೇ ವೇಳೆ ತಾಯಿಯ ಹೆಸರಿನಲ್ಲಿ ಒಂದು ಮರ-ಅಭಿಯಾನದಡಿ, ಉಪರಾಷ್ಟ್ರಪತಿ ಸಸಿ ನೆಡಲಿದ್ದಾರೆ. ನಾಳೆ, ಪಾಂಡಿಚೇರಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಲಿರುವ ಅವರು, ಜವಾಹರಲಾಲ್ ನೆಹರು ಸಭಾಂಗಣದಲ್ಲಿ, ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಆಡಳಿತ ಸಿಬ್ಬಂದಿಯೊಂದಿಗೆ ಸಂವಾದ ನಡೆಸಲಿದ್ದಾರೆ.

<><><><>

ಏರ್‌ಇಂಡಿಯಾ ವಿಮಾನ ಅಪಘಾತ ಸಂಭವಿಸಿ ೩ ದಿನ ಕಳೆದಿದ್ದು, ಈವರೆಗೆ ಆಸ್ಪತ್ರೆ ಸಿಬ್ಬಂದಿ ಮಾಜಿ ಗುಜರಾತ್ ಮುಖ್ಯಮಂತ್ರಿ ವಿಜಯ್ ರೂಪಾನಿ ಸೇರಿದಂತೆ ೮೦ ಸಂತ್ರಸ್ಥರ ಡಿಎನ್‌ಎ ಮಾದರಿ ಹೊಂದಾಣಿಕೆ ಮಾಡಿ ಅವರ ಗುರುತನ್ನು ದೃಢಪಡಿಸಿದ್ದಾರೆ. ಅಹಮದಾಬಾದ್ ಸಿವಿಲ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ. ರಜನೀಶ್ ಪಟೇಲ್ ಈ ಕುರಿತು ಮಾಹಿತಿ ನೀಡಿದ್ದು, ಕಳೆದ ರಾತ್ರಿಯ ವೇಳೆಗೆ ೯ ಜನರ ಡಿಎನ್‌ಎ ಹೊಂದಾಣಿಕೆ ಯಶಸ್ವಿಯಾಗಿ ನಡೆಸಲಾಗಿದ್ದು, ೩೩ ಮೃತ ದೇಹಗಳನ್ನು ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ತಿಳಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ವಿಜಯ್ ರೂಪಾನಿಯವರ ಪಾರ್ಥಿವ ಶರೀರದ ಅಂತ್ಯಸಂಸ್ಕಾರ ಇಂದು ಜರುಗಲಿದ್ದು, ಅವರ ಗೌರವಾಥ ಇಂದು ಗುಜರಾತ್ ರಾಜ್ಯಾದ್ಯಂತ ಶೋಕಾಚರಣೆ ಘೋಷಿಸಲಾಗಿದೆ.

<><><><>

ನ್ಯೂಯಾರ್ಕ್‌ನ ಮ್ಯಾಡಿಸನ್ ಸ್ಕ್ವೇರ್ ಗಾರ್ಡನ್‌ನಲ್ಲಿ ನಡೆದ ಸೂಪರ್ ವೆಲ್ಟರ್‌ವೇಟ್ ಬಾಕ್ಸಿಂಗ್‌ನಲ್ಲಿ, ಭಾರತೀಯ ಬಾಕ್ಸರ್ ನಿಶಾಂತ್ ದೇವ್, ಜೋಸು ಸಿಲ್ವಾ ಅವರನ್ನು ೬೦-೫೪ ಅಂತರದಿಂದ  ಸೋಲಿಸುವ ಮೂಲಕ ತಮ್ಮ ಎರಡನೇ ವೃತ್ತಿಪರ ಗೆಲುವನ್ನು ಸಾಧಿಸಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>